ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
Karnataka Residential Educational Institutions Society
(An Organisation of Govt. of Karnataka)

ಸಂಖ್ಯೆ: ಕವಶಿಸಸ/ಶಿಕ್ಷಣ/ಸಿಆರ್-11/2021-22

ದಿನಾಂಕ: 29..09.2021

# ಪ್ರಕಟಣೆ

ವಿಷಯ: 2021-22ನೇ ಶೈಕ್ಷಣಿಕ ಸಾಲಿಗೆ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳ ಪ್ರಥಮ ಪಿ.ಯು.ಸಿ.ಗೆ ಪ್ರವೇಶಕ್ಕಾಗಿ **ಐದನೇ** ಸುತ್ತಿನ ಆಯ್ಕೆ ಪಟ್ಟಿಯ ಪ್ರಕಟಣೆ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಸಕಇ ಮೊದೇಶಾ. ಬೆಂಗಳೂರು ದಿನಾಂಕ: 02.12.2020.

2. ಇದೇ ಸಮಸಂಖ್ಯೆ ಪತ್ರ ದಿನಾಂಕ: 04.09.2021,09.09.2021, 16.09.2021 ಮತ್ತು 22.09.2021.

******

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ,, ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಕಾಲೇಜುಗಳಿಗೆ 2021-22ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ತರಗತಿಗೆ ಪ್ರವೇಶಕ್ಕಾಗಿ ಉಲ್ಲೇಖ(2)ರ ದಿನಾಂಕಗಳಲ್ಲಿ ಪ್ರಕಟಣೆಯಾದ ನಾಲ್ಕು ಸುತ್ತುಗಳ ಆಯ್ಕೆ ಪಟ್ಟಿಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ದಾಖಲಾಗದೇ ಉಳಿದ ಸೀಟುಗಳು ಹಾಗೂ ಖಾಲಿ ಉಳಿದ ಸೀಟುಗಳನ್ನು ಪರಿಗಣಿಸಿ, ಉಲ್ಲೇಖ(1)ರ ಸರ್ಕಾರದ ಆದೇಶ ಹಾಗೂ ಸಂಘದ ಮಾರ್ಗಸೂಚಿ-2021 ರನ್ವಯ ಅಭ್ಯರ್ಥಿಗಳು ಅರ್ಜಿಯಲ್ಲಿ ಜಿಲ್ಲಾ/ಅಂತರ್ ಜಿಲ್ಲಾ ಕಾಲೇಜುಗಳಿಗೆ ದಾಖಲಾತಿ ಬಯಸಿ ನೀಡಿರುವ ಆದ್ಯತೆ, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮೆರಿಟ್, ವರ್ಗವಾರು ಮೀಸಲಾತಿ, ವಿಶೇಷ ವರ್ಗಗಳ ಮೀಸಲಾತಿ ಹಾಗೂ 371(ಜೆ) ಮೀಸಲಾತಿ ಆಧಾರದ ಮೇಲೆ, ಅಭ್ಯರ್ಥಿಗಳು ನಮೂದಿಸಿದ ಕಾಲೇಜು ಮತ್ತು ಸಂಯೋಜನೆ ಆದ್ಯತೆ ಮತ್ತು ರೋಸ್ಟರ್ ಬಿಂದು ಪರಿಗಣಿಸಿ ಐದನೇ ಸುತ್ತಿನ ಆಯ್ಕೆ ಪಟ್ಟಿಯನ್ನು ಸಂಘದ ಅಧಿಕೃತ ವೆಬ್‌ಸೈಟ್ : https://kreis.karnataka.gov.in/ನಲ್ಲಿ ಪ್ರಕಟಿಸಲಾಗಿದೆ.

ಇದಲ್ಲದೇ, ಕೋವಿಡ್-19 ರಿಂದ ಮೃತಪಟ್ಟ ಪೋಷಕರ ಮಕ್ಕಳಿಗೆ ವಿವಿಧ ಕಾಲೇಜುಗಳಲ್ಲಿ ಸೀಟು ಹಂಚಿಕೆ ಮಾಡಿದ್ದು, ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಘದ ಅಧಿಕೃತ ವೆಬ್‌ಸೈಟ್ : https://kreis.karnataka.gov.in/ನಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: 01.10.2021 ರ ಸಂಜೆ 4.00 ಗಂಟೆ ಯೊಳಗೆ ಆಯ್ಕೆಯಾದ ವಸತಿ ಕಾಲೇಜಿನಲ್ಲಿ ದಾಖಲಾತಿ ಮಾಡಿಕೊಳ್ಳತಕ್ಕದ್ದು.

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ

(ಕರಡು ಕಾ.ನಿ.ನಿ.ರವರಿಂದ ಅನುಮೋದಿಸಲ್ಪಟ್ಟಿದೆ)

ನಂ. 8, ಎಂ.ಎಸ್.ಬಿ-1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : ed.kreis@ka.gov.in, Website : www.kreis.kar.nic.in